# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***<u>ಪತ್ರಿಕಾ ಪ್ರಕಟಣೆ</u>*** **ದಿನಾಂಕ: 09.10.2011**

ಪಾಲಿಕೆಯ ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಹಲಸೂರು ಕೆರೆ ಅಭಿವೃದ್ಧಿಗಾಗಿ 2 ಕೋಟಿ ರೂ.ಗಳನ್ನು ಕಾಯ್ದಿರಿಸಲಾಗಿದ್ದು, ಅಭಿವೃದ್ಧಿ ಕಾಮಗಾರಿಗಳನ್ನು ನವೆಂಬರ್ ತಿಂಗಳಲ್ಲಿ ಪ್ರಾರಂಭಿಸಲಾಗುವುದೆಂದು ಪಾಲಿಕೆಯ ಆಯುಕ್ತರಾದ ಶ್ರೀ ಸಿದ್ದಯ್ಯ ರವರು ತಿಳಿಸಿದ್ದಾರೆ.

ಇಂದು ಸ್ಥಳೀಯ ಶಾಸಕರಾದ ಶ್ರೀ ಆರ್. ರೋಷನ್‌ಬೇಗ್ ರವರೊಂದಿಗೆ ಹಲಸೂರು ಕೆರೆಯ ತಪಾಸಣೆ ಕೈಗೊಂಡು ಕೆರೆಯ ಸುತ್ತಲು ಪಾದಚಾರಿ ಮಾರ್ಗ, ಕೊಳಚೆ ನೀರು ಕೆರೆಗೆ ಸೇರದಂತೆ ಕೆಲವು ಕಡೆ ತಡೆಗೋಡೆ ನಿರ್ಮಾಣ, ಸೇತುವೆ ನಿರ್ಮಾಣ, ಸುತ್ತಲು ನಿರ್ಮಿಸಿದ ಗ್ರಿಲ್‌ಗಳಿಗೆ ಪೈಂಟಿಂಗ್ ಮುಂತಾದ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದ್ದು, ಪ್ರಕ್ರಿಯೆ ಮುಗಿದ ತಕ್ಷಣವೇ ಮುಂದಿನ ತಿಂಗಳಿನಿಂದ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದೆಂದು ತಿಳಿಸಿದರು.

ಅಕ್ಟೋಬರ್ ತಿಂಗಳಲ್ಲಿ ಕೆರೆಯ ಸುತ್ತಲು ಬೆಳೆದ ಗಿಡಗಂಟಿಗಳು ಮತ್ತು ಪಾರ್ಥೇನಿಯಂ ತೆರವುಗೊಳಿಸಿ, ಇದೇ ತಿಂಗಳು ಸ್ಥಳೀಯ ಶಾಸಕರ ನೆರವಿನೊಂದಿಗೆ ಒಂದೇ ದಿನದಲ್ಲಿ ಕೆರೆಯ ಸುತ್ತಲು 300 ಸಸಿಗಳನ್ನು ನೆಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದೆಂದು ತಿಳಿಸಿದರು.

ಸ್ಥಳೀಯ ಶಾಸಕರಾದ ಶ್ರೀ ಆರ್. ರೋಷನ್‌ಬೇಗ್ ರವರು ಆಯುಕ್ತರಲ್ಲಿ ಮನವಿ ಮಾಡಿ, ಬೆಳಿಗ್ಗೆ ಮತ್ತು ಸಾಯಂಕಾಲ ಹಿರಿಯ ನಾಗರಿಕರು ವಿಹಾರಕ್ಕೆ ಬರುತ್ತಾರೆ. ಅವರ ರಕ್ಷಣೆಗಾಗಿ ಇನ್ನೂ ಹೆಚ್ಚಿನ ಹೋಮ್‌ಗಾರ್ಡ್ಸ್‌ಗಳನ್ನು ನಿಯೋಜಿಸಲು ಮತ್ತು ಪಾದಚಾರಿ ಮಾರ್ಗ ಅಭಿವೃದ್ಧಿಪಡಿಸಲು ತಿಳಿಸಿದರು.

ತದನಂತರ ತಿರುವಳ್ಳುವರ್ ಪ್ರತಿಮೆ ಸ್ಥಳಕ್ಕೆ ಶಾಸಕರೊಂದಿಗೆ ಭೇಟಿ ನೀಡಿ, ಇಲ್ಲಿ ಉದ್ಯಾನವನ ನಿರ್ವಹಣೆ, ಬೆಳಕಿನ ಮತ್ತು ಭದ್ರತೆ ವ್ಯವಸ್ಥೆ ಸಮರ್ಪಕವಾಗಿ ಆಗಬೇಕು. ಸಾರ್ವಜನಿಕರು ಬಂದು ನಮಗೆ ದೂರು ನೀಡುವವರೆಗೆ ನಮ್ಮ ಅಧಿಕಾರಿಗಳು ಸುಮ್ಮನೆ ಇರಬಾರದು. ಆಗಾಗ್ಗೆ ಸ್ಥಳ ಪರಿಶೀಲನೆ ಮಾಡಿ, ಇವೆಲ್ಲವುಗಳು ಸರಿಯಾಗಿ ನಿರ್ವಹಿಸಲಾಗುತ್ತಿದೆ ಎಂದು ಪರಿಶೀಲಿಸಬೇಕೆಂದು ಜಂಟಿ ಆಯುಕ್ತರಿಗೆ ತಿಳಿಸಿದರು.

ನಂತರ ಸ್ಥಳೀಯ ಶಾಸಕರಾದ ಶ್ರೀ ಅರವಿಂದ್ ಲಿಂಬಾವಳಿಯವರೊಂದಿಗೆ ಮಹದೇವಪುರ ವಲಯದ ಕೈಕೊಂಡರಹಳ್ಳಿ ಕೆರೆಗೆ ಭೇಟಿ ನೀಡಿ, ಸ್ಥಳೀಯರಿಂದ ಅಹವಾಲುಗಳನ್ನು ಸ್ವೀಕರಿಸಿದರು. ರಸ್ತೆ ಅಗಲೀಕರಣ, ಗಣೇಶ ವಿಸರ್ಜನೆಗಾಗಿ ಕಲ್ಯಾಣಿ ನಿರ್ಮಾಣ, ಮುಂತಾದ ವಿಷಯಗಳ ಕುರಿತು ಸ್ಥಳೀಯರ ಮನವಿ ಪರಿಶೀಲಿಸಿದ ಆಯುಕ್ತರು ಅಭಿವೃದ್ಧಿ ಕಾಮಗಾರಿಗಳಲ್ಲಿ ಎಲ್ಲರೂ ಒಟ್ಟಾಗಿ ಶ್ರಮಿಸಬೇಕು. ಗೊಂದಲಕ್ಕೆ ಅವಕಾಶ ಮಾಡಿಕೊಟ್ಟಲ್ಲಿ ಅಭಿವೃದ್ಧಿ ಕಾಮಗಾರಿಗಳು ಕುಂಠಿತಗೊಳ್ಳುತ್ತವೆ. ಆದ್ದರಿಂದ ನಾಗರಿಕರೆಲ್ಲರೂ ಸ್ಥಳೀಯ ಶಾಸಕರು ಮತ್ತು ಪಾಲಿಕೆ ಸದಸ್ಯರೊಂದಿಗೆ ಚರ್ಚಿಸಿ, ತೀರ್ಮಾನಗಳನ್ನು ತೆಗೆದುಕೊಳ್ಳಬೇಕೆಂದು ಸೂಚಿಸಿದರು. ಪಾಲಿಕೆಯಿಂದ ನಾಗರಿಕರ ಅನುಕೂಲಕ್ಕಾಗಿ ಎಲ್ಲಾ ಸೌಲಭ್ಯಗಳನ್ನು ಕಲ್ಪಿಸಲು ಸಿದ್ಧರಿದ್ದೇವೆ. ಅವುಗಳ ಬಳಕೆ ಸಮರ್ಪಕವಾಗಿ ಆಗಬೇಕೆಂದು ತಿಳಿಸಿದರು.

ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ ಮತ್ತು ಸರ್ಕಾರೇತರ ಸಂಸ್ಥೆಗಳು, ಕೆರೆ ಮತ್ತು ಪರಿಸರ ರಕ್ಷಣೆಗಾಗಿ ಈ ಪ್ರದೇಶದಲ್ಲಿ ಉತ್ತಮವಾಗಿ ಕೆಲಸ ನಿರ್ವಹಿಸುತ್ತಿವೆ. ಅದೇ ರೀತಿ ಸಮೀಪದಲ್ಲಿರುವ ಪರಪ್ಪನ ಅಗ್ರಹಾರ ಕೆರೆ, ಕಸವನಹಳ್ಳಿ ಕೆರೆ ಇವುಗಳ ಅಭಿವೃದ್ಧಿಗಾಗಿ ಶ್ರಮಿಸಬೇಕೆಂದು ಮನವಿ ಮಾಡಿದರು.

**ಸಾರ್ವಜನಿಕ ಸಂಪರ್ಕಾಧಿಕಾರಿ**